ದಿನಾಂಕಃ **07-11-2022**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ನನ್ನ ಕುಟುಂಬದ ಸದಸ್ಯರ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ದಾಖಲೆಗಳಲ್ಲಿರುವ ವಿಷಯಗಳನ್ನು ಓದಿ ನೋಡದೆ ಸಹಿಗಳನ್ನು ಮಾತ್ರ ಗುರುತಿಸಲಾಗುತ್ತದೆಯೇ ಎಂದರೆ ಸಾಕ್ಷಿಯು ದಾಖಲೆಗಳಲ್ಲಿರುವ ವಿಚಾರಗಳನ್ನು ಓದಿ ನಂತರ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ. ನನ್ನ ಲಿಖಿತ ಹೇಳಿಕೆಯಲ್ಲಿರುವ ನನ್ನ ಸಹಿಯನ್ನು ಗುರುತಿಸುತ್ತೇನೆ, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳಲ್ಲಿರುವ ಸಹಿಗಳನ್ನು ಗುರುತಿಸುತ್ತೇನೆ.

ನನ್ನ ಲಿಖಿತ ಹೇಳಿಕೆ ಸಲ್ಲಿಸುವ ಕಾಲದಲ್ಲಿ ಅದನ್ನು ತಯಾರಿಸಲು ನನ್ನ ವಕೀಲರಿಗೆ ದಾಖಲೆಗಳನ್ನು ನೀಡಿರುತ್ತೇನೆ. ನಮ್ಮ ತಂದೆ ಯಾವ ದಿನಾಂಕ , ತಿಂಗಳು ವರ್ಷದಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ವಾದಿಯ ತಂದೆ ವಿಭಾಗ ಮಾಡಿಕೊಂಡಿದ್ದಾರೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳಲ್ಲಿ ಸ್ವಲ್ಪ ದಾಖಲೆಗಳನ್ನು ಓದಿ ತಿಳಿದುಕೊಂಡಿದ್ದೇನೆ , ಸ್ವಲ್ಪ ದಾಖಲೆಗಳನ್ನು ಓದಿ ತಿಳಿದುಕೊಂಡಿಲ್ಲ. ನನ್ನ ತಂದೆ ಮತ್ತು ವಾದಿಯ ತಂದೆ ವಿಭಾಗ ಮಾಡಿಕೊಂಡಿದ್ದು ,ಈ ದಾವಾ ದಾಖಲಿಸಿದ ನಂತರ ಹಳೇ ಪೆಟ್ಟಿಗೆಯಲ್ಲಿ ಹುಡುಕುತ್ತಿದ್ದಾಗ ಸಿಕ್ಕಿದ್ದು ಅದನ್ನು ಹಾಜರುಪಡಿಸಿದ್ದೇನೆ ಓದಿ ತಿಳಿದುಕೊಂಡಿಲ್ಲ. ಸದರಿ ದಾಖಲೆಯನ್ನು ಲಿಖಿತ ಹೇಳಿಕೆ ಸಲ್ಲಿಸಿದ ನಂತರ ಕೊಟ್ಟಿದ್ದೆನೋ ಅಥವಾ ಮೊದಲೇ ಕೊಟ್ಟಿದ್ದೇನೋ ನನಗೆ ನೆನಪಿಲ್ಲ. ನಮ್ಮ ಮನೆಯಲ್ಲಿ ನನ್ನ ತಂದೆ ಮರಣದ ನಂತರ ,ಸಿಕ್ಕಿರುವ ದಾಖಲೆಗಳನ್ನು ಓದಿಲ್ಲ , ನನ್ನ ತಂದೆ ನನಗೆ ಬರೆದುಕೊಟ್ಟಿರುವ ದಾಖಲೆಗಳನ್ನು ಓದಿದ್ದೇನೆ.

ನನ್ನ ತಂದೆ ನನಗೆ ಪಾಲು ವಿಭಾಗ ಪತ್ರ ಬರೆದುಕೊಟ್ಟಿದ್ದಾರೆ, ಯಾವ ತಿಂಗಳು , ವರ್ಷ , ನನಗೆ ಗೊತ್ತಿಲ್ಲ , ದಾಖಲೆಯನ್ನು ತೋರಿಸಿದರೆ ನೋಡಿ ಹೇಳುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆ ನನಗೆ ವಿಭಾಗ ಪತ್ರ ಬರೆದುಕೊಡುವಾಗ ಸಾಕ್ಷಿದಾರರಾಗಿ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನು , ನನ್ನ ತಮ್ಮ , ನನ್ನ ಹೆಂಡತಿ , ತಮ್ಮನ ಹೆಂಡತಿ ಮತ್ತು ನನ್ನ ತಾಯಿ , ನನ್ನ ತಂದೆ ಇದ್ದೆವು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಯಾರು ಬರೆದಿದ್ದರು ಗೊತ್ತಿಲ್ಲ ನನ್ನ ತಂದೆ ಬರೆಸಿರುತ್ತಾರೆ. ಸದರಿ ದಾಖಲೆಗೆ ಉಪ-ನೋಂದಣಾಧಿಕಾರಿಗಳ ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ವಿಭಾಗ ಪತ್ರದಲ್ಲಿ ಸ್ವತ್ತುಗಳು ನನ್ನ ತಂದೆಗೆ ಹೇಗೆ ಬಂತು ಎಂದು ಬರೆಯಲಾಗಿದೆಯೋ ಇಲ್ಲವೋ ಗೊತ್ತಿಲ್ಲ ಆದರೆ ನನ್ನ ತಂದೆಯಿಂದ ನನಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ ನಿಡಿ-112 ರಲ್ಲಿ ಲಕ್ಕಮ್ಮ , ರಂಗಮ್ಮನ ಸಹಿ ಇಲ್ಲ ಎಂದರೆ ಸಾಕ್ಷಿಯು ಸದರಿಯವರ ಹೆಸರನ್ನು ಪೆನ್ಸಿಲ್ ನಲ್ಲಿ ಬರೆದಿರುವ ವೃತ್ತಾಕಾರದಲ್ಲಿ ಬರೆಯಲಾಗಿದೆ ಎಂದು ನುಡಿಯುತ್ತಾರೆ. ಹಾಗೆ ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಡಿ-112 ರ ದಾಖಲೆಯನ್ನು ಲಿಖಿತ ಹೇಳಿಕೆ ಸಲ್ಲಿಸುವ ಕಾಲದಲ್ಲಿ ವಕೀಲರಿಗೆ ನೀಡಿದ್ದೇನೆ. ನಿಡಿ-112 ಮತ್ತು ನಿಪಿ-13 ರಲ್ಲಿ ತಿಪ್ಪೇಸ್ವಾಮಿ ಬಿಕ್ಲಂದಾರರು ಎಂದು ಸಹಿ ಮಾಡಿ ಸೀಲು ಹಾಕಲಾಗಿದೆ ಎಂದರೆ ಸರಿ.

ವಾದಿಯ ತಂದೆಯ ಹೆಸೆರನ್ನು ನನಗೆ ಗುರುತಿಸಲಾಗುವುದಿಲ್ಲ. ನಿಪಿ-13 ರಲ್ಲಿರುವ ಹೊನ್ನಗಿರಿಯಪ್ಪ ಎಂಬ ಸಹಿ ನನ್ನ ತಂದೆಯದು ಎಂದರೆ ಸರಿಯಲ್ಲ. ನಿಡಿ-112 ರಲ್ಲಿರುವ ಸಹಿ ನನ್ನ ತಂದೆಯದು. ನಿಡಿ-112 ರಲ್ಲಿರುವ ಹೊನ್ನಗಿರಿಯಪ್ಪ ಎಂಬ ಸಹಿಗಳು ನನ್ನ ತಂದೆಯದ್ದಲ್ಲ ಎಂದರೆ ಸರಿಯಲ್ಲ. ಲಿಖಿತ ಹೇಳಿಕೆಯಲ್ಲಿ ನಿಡಿ-112 ರ ದಾಖಲೆಯ ಬಗ್ಗೆ ಹೇಳಲಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಿಡಿ-112 ರ ದಾಖಲೆಯು ಲಿಖಿತ ಹೇಳಿಕೆ

ಸಲ್ಲಿಸುವ ಕಾಲದಲ್ಲಿ ಇಲ್ಲದ ಕಾರಣ ಅದರಲ್ಲಿರುವ ವಿಚಾರಗಳನ್ನು ಹೇಳಿ ಬರೆಸಿಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ ಬಾಯಿ ಮಾತಿನ ಮೂಲಕ ನನ್ನ ತಂದೆ ಮತ್ತು ನಾನು ವಿಭಾಗಮಾಡಿಕೊಂಡಿದ್ದೇವೆ ಎಂದು ಹೇಳಿರುವುದು ಸರಿಯಾಗಿದೆ. ನನ್ನ ತಂದೆ ಮತ್ತು ನಾನು ನೋಂದಾಯಿತ ವಿಭಾಗ ಪತ್ರದ ಮೂಲಕ ಭಾಗಮಾಡಿಕೊಂಡಿರುವುದು ಸರಿಯಾಗಿದೆ. ಬಾಯಿ ಮಾತಿನ ಮೂಲಕ ವಿಭಾಗ ಮಾಡಿಕೊಂಡಿದ್ದೇವೆ ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿರುವ ವಿಚಾರಗಳು ನನಗೆ ನೆನಪಿಲ್ಲ.

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ವಾದಿಯ ತಂದೆಗೆ ಮಡಕಶಿರಾ ತಾಲ್ಲೂಕು , ಗಂಗವಾಯಿ ಪಾಳ್ಯಾದಲ್ಲಿದ್ದ ಆಸ್ತಿಗಳನ್ನು ವಾದಿಯ ತಂದೆ ತೆಗೆದುಕೊಂಡಿದ್ದು , ದಾವಾ ಸ್ವತ್ತುಗಳನ್ನು ನನ್ನ ತಂದೆ ಪಡೆದುಕೊಂಡಿದ್ದರು ಎಂದು ನನ್ನ ಅಜ್ಜಿ ಹೇಳುತ್ತಿದ್ದರಿಂದ ನಾನು ಹಾಗೇ ಬರೆಸಿದ್ದೇನೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನನ್ನ ಲಿಖಿತ ಹೇಳಿಕೆ ಸಲ್ಲಿಸುವಾಗ ವಕೀಲರಿಗೆ ತಿಳಿಸಿದ್ದೆ. ನನ್ನ ಲಿಖಿತ ಹೇಳಿಕೆಯಲ್ಲಿ ಬಾಯಿ ಮಾತಿನ ಮೂಲಕ ಹಿಸ್ಸಾ ಬಿಡುಗಡೆ ಪತ್ರ ಆಯಿತು ಎಂದು ಬರೆಸಿದ್ದೇನೆ

ನಿಪಿ-12 ರಲ್ಲಿರುವ ಸಹಿ ನನ್ನದೆ , ನನ್ನ ತಮ್ಮ ಸಹ ಸಹಿ ಮಾಡಿರುತ್ತಾರೆ. ನಿಪಿ-12 ರಲ್ಲಿ ನಮೂದಾಗಿರುವ ರಾಮಚಂದ್ರಪ್ಪ ಬಿನ್ ಲೆ. ಮೂಡ್ಲಪ್ಪ ವಾದಿ ಎಂದರೆ ಸರಿ. ನಮ್ಮ ಮನೆಯ ಪೆಟ್ಟಗೆಯಲ್ಲಿ ನನ್ನ ತಂದೆ ಮತ್ತು ದೊಡ್ಡಪ್ಪ ಮಾಡಿಕೊಂಡಿರುವ 2 ದಾಖಲೆಗಳು ಸಿಕ್ಕಿದ್ದವು. ಸದರಿ ದಾಖಲೆಗಳು ಯಾವ ವರ್ಷದಲ್ಲಿ ಸಿಕ್ಕದವು ಎಂದು ನೆನಪಿಲ್ಲ. ಸದರಿ ದಾಖಲೆಗಳನ್ನು ಲಿಖಿತ ಹೇಳಿಕೆ ಸಲ್ಲಿಸುವ ಕಾಲಕ್ಕೆ ನನ್ನ ವಕೀಲರಿಗೆ ಹೇಳಿರುತ್ತೇನೆ.

ಸದರಿ ದಾಖಲೆಗಳನ್ನು ನಾನು ವಕೀಲರಿಗೆ ನೀಡಿದ್ದಲ್ಲಿ ಸದರಿ ವಿಚಾರವನ್ನು ವಕೀಲರು ಲಿಖಿತ ಹೇಳಿಕೆಯಲ್ಲಿ ತಿಳಿಸುತ್ತಿದ್ದರು ಎಂದರೆ ಸರಿಯಲ್ಲ. ಸದರಿ ದಾಖಲೆಗಳು ನಮ್ಮ ಮನೆಯ ಪಟ್ಟೆಗೆಯಲ್ಲಿ ಸಿಕ್ಕಿಲ್ಲ , ಈ ಕೇಸ್ ಗಾಗಿ ಇತ್ತೀಚೆಗೆ ಸೃಷ್ಟಿಮಾಡಲಾಗಿದೆ ಎಂದರೆ

ಸರಿಯಲ್ಲ. ನಿಡಿ-113 ದಾಖಲೆಯ 2 ನೇ ಪುಟದ ಮೆಲ್ಬಾಗದಲ್ಲಿ ಕೈ ಬರವಣಿಗೆಯಲ್ಲಿ ಬರೆಯಲಾಗಿರುವ ಅಂಶಗಳು ಇತ್ತೀಚೆಗೆ ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-113 ದಾಖಲೆಯನ್ನು ಇತ್ತೀಚೆಗೆ ಸೃಷ್ಟಿಮಾಡಿ , ಹೊಗೆಯಲ್ಲಿಟ್ಟಿದ್ದರಿಂದ ಹಳೇ ದಾಖಲೆಯಾಗಿ ಕಾಣುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-113 ರ 2 ನೇ ಪುಟದ ಮೆಲ್ಭಾಗದಲ್ಲಿ ಡಿಸೆಂಬರ್ 17 ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು ನನಗೆ 17 ಸಂಖ್ಯೆ ಮತ್ತು ಡಿ ಅಕ್ಷರ ಮಾತ್ರ ಕಾಣುತ್ತಿದೆ ಎಂದು ನುಡಿಯುತ್ತಾರೆ. ನಿಡಿ-113 ರ ದಾಖಲೆಯನ್ನು ನನ್ನ ತಂದೆ , ದೊಡ್ಡಪ್ಪ ಬರೆಸಿರುತ್ತಾರೆ , ಎಲ್ಲಿ ಬರೆಸಿರುತ್ತಾರೆ , ಯಾರು ಸಾಕ್ಷಿ ಹಾಕಿರುತ್ತಾರೆ ನನಗೆ ಗೊತ್ತಿಲ್ಲ.

ಸಾಮಾನ್ಯವಾಗಿ ಸಹಿಗಳನ್ನು ನೋಡಿದರೆ ಸಹಿಗಳಲ್ಲಿರುವ ವ್ಯತ್ಯಾಸಗಳು ಗೊತ್ತಾಗುತ್ತದೆ. ನಿಡಿ-113 ದಾಖಲೆಯಲ್ಲಿ ಮೊದಲ ಪುಟದಲ್ಲಿರುವ ಮೂಡ್ಲಪ್ಪ ಸಹಿಯಲ್ಲಿ " ಮೂ " ಅಕ್ಷರ ಮತ್ತು ದಾಖಲೆಯಲ್ಲಿ 2 ನೇ ಪುಟದಲ್ಲಿರುವ ಮೂಡ್ಲಪ್ಪ ಸಹಿಯಲ್ಲಿ "ಮೂ " ಅಕ್ಷರ ವ್ಯತ್ಯಾಸದಿಂದ ಕೂಡಿದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-113 ಮತ್ತು ನಿಪಿ-13 ರ ದಾಖಲೆಯಲ್ಲಿ ಮೂಡ್ಲಪ್ಪನವರ ಸಹಿ ವ್ಯತ್ಯಾಸದಿಂದ ಕೂಡಿದೆ ಎಂದರೆ ಸಾಕ್ಷಿಯು ಅವರು ಹೇಗೆ ಸಹಿ ಮಾಡುತ್ತಿದ್ದರೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-13 ರ ದಾಖಲೆಯಲ್ಲಿ ಎರಡೂ ಕಡೆ ವಾದಿಯ ತಂದೆ ಕೆ. ಮೂಡ್ಲಪ್ಪ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-112 , ನಿಡಿ-113 ರ ದಾಖಲೆಗಳಲ್ಲಿ ಮೂಡ್ಲಪ್ಪ ನವರ ಸಹಿಯನ್ನು ಫೋರ್ಜರಿ ಮಾಡಲಾಗಿದೆ ಎಂದರೆ ಸರಿಯಲ್ಲ.

ವಾದಿಯ ತಂದೆ ಮೂಡ್ಲಪ್ಪನವರು ಹೇಗೆ ಸಹಿ ಮಾಡುತ್ತಿದ್ದರು ನನಗೆ ಗೊತ್ತಿಲ್ಲ. ಅವರ ಸಹಿಗಳನ್ನು ನಾನು ಗುರುತಿಸಲಾಗುವುದಿಲ್ಲ ಎಂದರೆ ಸರಿ. ನಿಡಿ-112 , ನಿಡಿ-113 ರ ದಾಖಲೆಗಳನ್ನು ಸೃಷ್ಟಿಮಾಡಿ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ ವಾದಿಯ ತಂದೆ ಮೂಡ್ಲಪ್ಪ ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿದ್ದಾರೆ ಎಂದು ಎಲ್ಲಿಯೂ ಹೇಳಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾಖಲೆಗಳನ್ನು ಸೃಷ್ಟಿಮಾಡಿಕೊಂಡು

ಲಿಖಿತ ಹೇಳಿಕೆಯನ್ನು ತಿದ್ದುಪಡಿ ಮಾಡಬೇಕೆಂದು ವಕೀಲರ ಮೂಲಕ ಅರ್ಜಿ ಸಲ್ಲಿಸಿದ್ದೆ ಎಂದರೆ ನನಗೆ ನೆನಪಿಲ್ಲ. ಸದರಿ ಅರ್ಜಿ ವಜಾ ಆಯಿತು ಎಂದರೆ ನನಗೆ ಗೊತ್ತಿಲ್ಲ.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಪ್ರಕರಣವನ್ನು ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.